ಬಿಜಾಪುರ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ

೫೯೭೨. ಮನೋಹರ ಐನಾಪುರ (ಬಳ್ಳೊಳ್ಳಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಬಿಜಾಪುರ ಜಿಲ್ಲೆಯ ಅನೇಕ ಪ್ರಾಥಮಿಕ ಶಾಲೆಗಳಲ್ಲಿ ಒಂದು ಅಥವಾ ಎರಡು ಉಪಾಧ್ಯಾಯರು ಮಾತ್ರ ಬೋಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಆ) ಹಾಗಿದ್ದಲ್ಲಿ ದಿನಕ್ಕೆ ೭ ವಿಭಾಗಗಳಲ್ಲಿ ಪಾಠ ಮಾಡುವುದು ಅವರಿಗೆ ಕಷ್ಟವಲ್ಲವೆ ?

(ಇ) ಹಾಗಿದ್ದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ.

ಶ್ರೀ ಕೆ. ಎಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

(ಅ) ಬಂದಿದೆ.

(ಆ) ಹೌದು.

(ಇ) ಹೌದು.

ಚಿಕ್ಕಪೇಟೆ ಕ್ಷೇತ್ರದ ಸರ್ಕಾರಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಪೀಠೋಪಕರಣ ಮತ್ತು ಇತರೆ ಸಾಮಗ್ರಿಗಳ ಕೊರತೆ

೬೨೫. ಶ್ರೀ ಪೆರಿಕಾಲ್ ಎಂ. ವಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿ ಪೀಠೋಪಕರಣ ಮತ್ತು ಭೋದನಾ ಸಾಮಗ್ರಿ ಕೊರತೆ ಇರುವ ಸರ್ಕಾರಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳ ಹೆಸರುಗಳು;

(ಆ) ಮೇಲಿನ ಸರ್ಕಾರಿ ಶಾಲೆಗಳಿಗೆ ಪೀಠೋಪಕರಣ ಮತ್ತು ಇತರೆ ಸಾಮಗ್ರಿಗಳನ್ನು ಒದಗಿಸಲು ಕೈಗೊಂಡ ಕ್ರಮಗಳೇನು ;

(ಇ) ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿರುವ ವಿವಿಧ ಸರ್ಕಾರಿ ಪ್ರಾಥಮಿಕ ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳಿಗೆ ೧೯೮೯–೯೦ನೇ ಸಾಲಿನಲ್ಲಿ ಪೀಠೋಪಕರಣ ಮತ್ತು ಭೋದನಾ ಸಾಮಗ್ರಿಗಳಿಗೆ ಖರ್ಚು ಮಾಡಿದ ಹಣ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು) —

(ಅ) ಪಟ್ಟಿಯನ್ನು ಲಗತ್ತಿಸಿದೆ.

ಪ್ರಾಥಮಿಕ ಶಾಲೆಗಳು

(ಆ) ೧. ಶಾಲಾಭಿವೃದ್ಧಿ ಸಮಿತಿಗಳಿಂದ ಸುಮಾರು ೬೫೪೦ ರೂಪಾಯಿಗಳನ್ನು ಸಂಗ್ರಹಿಸಿ ಆ ಮೊತ್ತದ ಪೀಠೋಪಕರಣ ಮತ್ತು ಪಾಠೋಪಕರಣಗಳನ್ನು ಈ ಶಾಲೆಗಳಿಗೆ ಒದಗಿಸಲಾಗಿದೆ.

೨. ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ರೂ. ೧೩೫೪–೪೫ ಮೌಲ್ಯದ ಟು–ಇನ್–ಒನ್ ರೇಡಿಯೋ ಮತ್ತು – ಕ್ಯಾಸೆಟ್ ಪ್ಲೇಯರ್‌ಗಳನ್ನು ಒದಗಿಸಲಾಗಿದೆ. ಮತ್ತು ೧,೨೦೦ ರೂ. ಮೌಲ್ಯದ ವಿಜ್ಞಾನದ ಕಿಟ್‌ಗಳನ್ನು ಒದಗಿಸಲಾಗಿದೆ.

೩. ೧೯೯೦–೯೧ನೇ ಸಾಲಿನ ಯೋಜನಾ ಆಯವ್ಯಯದಲ್ಲಿ ಪ್ರಾಥಮಿಕ ಶಾಲೆಗಳಿಗೆ ಪೀಠೋಪಕರಣಗಳಿಗೆಂದು ೫೦,೦೦೦ ರೂ.ಗಳನ್ನು ಒದಗಿಸಲಾಗಿದೆ.

ಪ್ರೌಢ ಶಾಲೆಗಳು

೧. ಕೇಂದ್ರ ಪುರಸ್ಕೃತ ಯೋಜನೆ "ಶಾಲಾ ಕಾಲೇಜುಗಳಲ್ಲಿ ಪ್ರಯೋಗಾಲಯ ಗ್ರಂಥಾಲಯ ಗಳನ್ನು ಬಲಪಡಿಸುವಿಕೆ" ಅಡಿಯಲ್ಲಿ ಪ್ರತಿ ಶಾಲೆಗೆ ೩೫,೦೦೦ ರೂ.ನಂತೆ ವಿಜ್ಞಾನದ ಉಪಕರಣ ಮತ್ತು ಪುಸ್ತಕಗಳನ್ನು ಒದಗಿಸಲಾಗಿದೆ.

೨. ರಾಜ್ಯದ ೧೯೯೦-೯೧ನೇ ಸಾಲಿನ ಶಿಕ್ಷಣ ಇಲಾಖೆಯ ಯೋಜನಾ ಆಯವ್ಯಯದಲ್ಲಿ ಬೆಂಗಳೂರು ಜಿಲ್ಲೆಗೆ ೩.೦೦ ಲಕ್ಷ ರೂ.ಗಳನ್ನು ಒದಗಿಸಿದ್ದು, ಅದರಲ್ಲಿ ಪ್ರತಿಯೊಂದು ಪ್ರೌಢ ಶಾಲೆಗೂ ೨,೦೦೦ ರೂ. ಮೌಲ್ಯದ ಪೀಠೋಪಕರಣಪೂರೈಕೆ ಆಗಲಿದೆ.

(ಇ) ರೂ. ೧.೯೧,೮೫೪-೩೬.

ಅನುಬಂಧ—1

ಬೋಧನೆ ಸಾಮಗ್ರಿ ಮತ್ತು ಪೀಠೋಪಕರಣಗಳ ಕೊರತೆ ಇರುವ ಶಾಲೆಗಳ ಪಟ್ಟಿ

ಪ್ರಾಥಮಿಕ ಶಾಲೆಗಳು

೧. ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆ, ಕೆಮ್ಮನಗುಂಡಿ ರಸ್ತೆ, ಬೆಂಗಳೂರು.
೨. ಸರ್ಕಾರಿ ಹೆಣ್ಣುಮಕ್ಕಳ ಪ್ರಾಥಮಿಕ ಶಾಲೆ, ಕಾಟನ್‌ಪೇಟೆ, ಬೆಂಗಳೂರು.
೩. ಸರ್ಕಾರಿ ಕನ್ನಡ ತಮಿಳು ಪ್ರಾಥಮಿಕ ಶಾಲೆ, ಅಂಜನಪ್ಪ ಗಾರ್ಡನ್, ಬೆಂಗಳೂರು.
೪. ಸರ್ಕಾರಿ ಆಂಗ್ಲ ಪ್ರಾಥಮಿಕ ಶಾಲೆ, ರೈಲ್ವೇ ಕಾಲೋನಿ, ಬೆಂಗಳೂರು.
೫. ಸರ್ಕಾರಿ ಉರ್ದು ಪ್ರಾಥಮಿಕ ಶಾಲೆ, ಸುಲ್ತಾನ್‌ಪೇಟೆ, ಬೆಂಗಳೂರು.
೬. ಸರ್ಕಾರಿ ಉರ್ದು ಪ್ರಾಥಮಿಕ ಶಾಲೆ, ಕಾಟನ್‌ಪೇಟೆ, ಬೆಂಗಳೂರು.
೭. ಸರ್ಕಾರಿ ಪ್ರಾಥಮಿಕ ಶಾಲೆ, ಕೆಂಪಾಪುರ ಅಗ್ರಹಾರ, ಬೆಂಗಳೂರು.
೮. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಾಟನ್‌ಪೇಟೆ, ಬೆಂಗಳೂರು.
೯. ಸರ್ಕಾರಿ ಬಾಲಕರ ಮಾಧ್ಯಮಿಕ ಶಾಲೆ, ಮಾವಳ್ಳಿಪೇಟೆ, ಬೆಂಗಳೂರು.
೧೦. ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಕಾಟನ್‌ಪೇಟೆ, ಬೆಂಗಳೂರು.
೧೧. ಸರ್ಕಾರಿ ಕನ್ನಡ ಬಾಲಕರ ಮಾಧ್ಯಮಿಕ ಶಾಲೆ, ಸುಲ್ತಾನ್‌ಪೇಟೆ, ಬೆಂಗಳೂರು.
೧೨. ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಪೂರ್ಣಯ್ಯ ಛತ್ರ, ಬೆಂಗಳೂರು.
೧೩. ಸರ್ಕಾರಿ ಬಾಲಕರ ಮಾಧ್ಯಮಿಕ ಶಾಲೆ, ಕೆಂಪಾಪುರ ಅಗ್ರಹಾರ, ಬೆಂಗಳೂರು.
೧೪. ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ನಗರ ರೈಲ್ವೆ ನಿಲ್ದಾಣ, ಬೆಂಗಳೂರು.
೧೫. ಸರ್ಕಾರಿ ತಮಿಳು ಮಾದರಿ ಶಾಲೆ, ಬೇಲಿ ಮಠದ ರಸ್ತೆ, ಬೆಂಗಳೂರು.
೧೬. ಸರ್ಕಾರಿ ಉರ್ದು ಬಾಲಕರ ಮಾದರಿ ಪ್ರಾಥಮಿಕ ಶಾಲೆ, ಮಾಗಡಿ ರಸ್ತೆ, ಬೆಂಗಳೂರು.

ಪ್ರೌಢಶಾಲೆಗಳು

೧೭. ಸರ್ಕಾರಿ ಪ್ರೌಢಶಾಲೆ, ಕಾಟನ್‌ಪೇಟೆ, ಬೆಂಗಳೂರು.
೧೮. ಸರ್ಕಾರಿ ಪ್ರೌಢಶಾಲೆ, ಚಿಕ್ಕಪೇಟೆ, ಬೆಂಗಳೂರು.
೧೯. ಸರ್ಕಾರಿ ಪ್ರೌಢಶಾಲೆ, ಸೂಪರ್ ಚಿತ್ರಮಂದಿರ ಹಿಂಭಾಗ, ಬೆಂಗಳೂರು.